# ಆಹಾ ಸುದ್ದಿ!

★ ಸಸಿತೋಟ



ಮೆಕ್ಸಿಕೋದಲ್ಲಿ ಪೋಲ್ ಡಾನ್ಸ್ ತರಬೇತಿ ನೀಡುವ ಗ್ಲ್ಯಾಡಿಸ್ ಒಲಿವಾ ಆರು ತಿಂಗಳ ಗರ್ಭಿಣಿ. ಭಾರವಾದ ಹೊಟ್ಟೆ ಹೊತ್ತು ಸಲೀಸಾಗಿ ಡಾನ್ಸ್ ತರಬೇತಿ ನೀಡುತ್ತಿದ್ದಾಳೆ. ದಪ್ಪ ಹೊಟ್ಟೆ ಕರಗಿಸಲು ಪೋಲ್ ಡಾನ್ಸ್ ತರಗತಿ ಸೇರುವವರು ಅರೆ ಕ್ಷಣ ತಬ್ಬಿಬ್ಬಾದರೂ ನಂತರ ಅಬ್ಬಾ ಆಕೆಯೇ! ಎನ್ನುತ್ತಿದ್ದಾರಂತೆ.

ಅಮೆರಿಕಾದ ಸ್ಯಾನ್ ಡಿಯಾಗೊದಲ್ಲಿ ವಾಕರ್ ದಂಪತಿ ಹೊಸ ಮನೆ ಪ್ರವೇಶಿಸಿದಾಗ ಮನೆಯನ್ನು ನವೀಕರಣ ಮಾಡುವ ಉಮೇದು ಬಂತು. ಮೇಲ್ಸೇತುವೆ, ಸುರಂಗ, ಸುರುಳಿಯಾಕಾರದ ಮೆಟ್ಟಿಲು, ಇಳಿಜಾರು ಕಾಲುದಾರಿ, ಮೈ ಉಜ್ಜಿಕೊಳ್ಳುವ ಕಂಬ.. ಎಲ್ಲವೂ ಸಿದ್ಧಗೊಂಡು ಮನೆಯೊಳಗೊಂದು ಮನೆಯೇ ಸೃಷ್ಟಿಯಾಯಿತು. ಆದರೆ ಅದು ಮಾರ್ಜಾಲ ಮನೆ. ಬೆಕ್ಕುಗಳಿಗೆ ಇಡೀ ಮನೆಯನ್ನೇ ಬಿಟ್ಟುಕೊಟ್ಟ ವಾಕರ್ ದಂಪತಿ ತಮಗಾಗಿ ಇಟ್ಟುಕೊಂಡಿರುವ ಒಂದೇ ಕೊಠಡಿಯಲ್ಲಿ ವಾಕ್ ಮಾಡುತ್ತಿದ್ದಾರಂತೆ.



ಕೆನಡಾದ ಜಾನ್ ಮೊರಿಲ್ಲೊ ಡೆಟ್ರಾಯಿಟ್ ನದಿಯನ್ನು ಈಜಿ ದಾಟಿದ್ದಲ್ಲದೇ ವಾಪಸ್ಸು ಕೂಡಾ ಸುರಕ್ಷಿತವಾಗಿ ಬಂದ. ಇದೆಲ್ಲಾ ಸಾಧ್ಯವಾಗಿದ್ದು 8 ಕ್ಯಾನ್ ಬಿಯರ್ ಕುಡಿದಿದ್ದರಿಂದ ಎಂದು ಮಾಧ್ಯಮಗಳ ಮುಂದೆ ನಗೆ ಬೀರುತ್ತ ಹೇಳಿದ. ಬಹುಮಾನದ ನಿರೀಕ್ಷೆಯಲ್ಲಿದ್ದ ಜಾನ್‌ಗೆ ಸಿಕ್ಕಿದ್ದು ಪೊಲೀಸರಿಂದ ಬಂಧನ, 35 ಸಾವಿರ ಡಾಲರ್ ದಂಡ. ಜೊತೆಗೆ ಒಂದು ವರ್ಷದವರೆಗೆ ಯಾವುದೇ ಕಾಲುವೆ, ನದಿಯಲ್ಲಿ ಈಜಬಾರದೆಂಬ ಕಟ್ಟಳೆ. ನೀತಿ: ಸಾಧನೆ ಮಾಡಿದರೂ ಪ್ರಚಾರಕ್ಕೆ ಹೋಗಬಾರದು.

ಅಮೆರಿಕಾದ ಓಹಿಯೋದಲ್ಲಿ ಅಕ್ರಮ ವಲಸೆಗಾರರಿಗೆ ಗುರುತು ಚೀಟಿ ಹಾಗೂ ವಾಹನ ಚಾಲನಾ ಪರವಾನಗಿ ನೀಡಿದ್ದಕ್ಕಾಗಿ ಲೈಸೆನ್ಸ್ ಏಜೆನ್ಸಿಯ ಮಾಜಿ ಉದ್ಯೋಗಿ ಬೆಟಿನಾಗೆ ನ್ಯಾಯಾಲಯ ನೀಡಿದ ಶಿಕ್ಷೆ ಏನು ಗೊತ್ತೆ? ಮುಂದಿನ ಐದು ವರ್ಷಗಳ ಅವಧಿಯಲ್ಲಿ ಪ್ರತಿ ಕ್ರಿಸ್ಮಸ್ ಸಂದರ್ಭದಲ್ಲಿ ಮೂರು ದಿನಗಳ ಕಾಲ ಆಕೆ ಜೈಲಿನಲ್ಲಿರಬೇಕು. ಹಬ್ಬದ ಖುಷಿ ತಪ್ಪಿದ್ದಕ್ಕೆ ಬೆಟಿನಾ ಬೇಸರಪಟ್ಟಳಂತೆ. ನಮ್ಮಲ್ಲೂ ಇಂತಹ ಶಿಕ್ಷೆ ನೀಡಿದರೆ ಹಬ್ಬದ ಖರ್ಚಾದರೂ ಉಳಿಯುತ್ತದೆ ಎಂದ ಸಂತಸ ಪಡುವವರ ಸಂಖ್ಯೆ ಎಷ್ಟಿರುತ್ತದೋ?

ರಷ್ಯಾದ ಕಿಂಡರ್‌ಗಾರ್ಟನ್ ಶಿಕ್ಷಕಿ ತ್ರೆತಿಯಾಕೊವಾ, ಆಕೆಯ ಸಹೋದರಿ ಮಗಳು ತೊಟ್ಟಿರುವ ಉಡುಪು ಚಾಕೊಲೇಟ್, ಕ್ಯಾಂಡಿ ಸುತ್ತುವ ಕಾಗದಗಳಿಂದ ತ್ರೆತ್ರಿಯಾಕೊವಾಳೇ ಮಾಡಿದ್ದು. ಚಾಕೊಲೇಟ್ ಹೊದಿಕೆಗಳಿಂದ ಬೊಂಬೆಗೆ ಉಡುಪು ಮಾಡುವ ಹವ್ಯಾಸ ಹಲವರದ್ದು. ಆದರೆ ದೊಡ್ಡವರ ಉಡುಪಿಗೂ ಸಾಕಾಗುವಷ್ಟು ಹೊದಿಕೆ ಸಂಗ್ರಹಿಸುತ್ತಾಳೆಂದರೆ ಕಿಂಡರ್ ಗಾರ್ಟನ್ ಶಿಕ್ಷಕಿಯಾಗಿದ್ದೂ ಸಾರ್ಥಕವಾಯಿತು.



ದಾಖಲೆಗಾಗೇ ದಾಖಲೆ ಮಾಡುವವರು ಬಹಳ ಮಂದಿ. ದಾಖಲೆ ಜೊತೆ ಲೀಲೆಗಳನ್ನು ಮಿಶ್ರ ಮಾಡುವವರು ಕೆಲವೇ ಮಂದಿ. ಇತ್ತೀಚೆಗೆ ಸ್ಪೇನಿನ ಬಳಿಯ ಅಲ್ಮೇರಾದಲ್ಲಿ ಇಂತಹದ್ದೆ ದಾಖಲೆಯ ಲೀಲಾವಿಲಾಸ ನಡೆಯಿತು. 726 ಮಂದಿ ಒಂಟಿಯಾಗಿ, ಜೋಡಿಯಾಗಿ, ಗುಂಪುಗುಂಪಾಗಿ ಹುಟ್ಟುಡುಗೆಯಲ್ಲಿ ಮೆಡಟರೇನಿಯನ್ ಕಡಲಲ್ಲಿ ಜಲಕ್ರೀಡೆಯಾಡಿದರು. ತಂಪಾದ ನೀರಿನಲ್ಲಿ ನಡೆದ ಜಲವಿಹಾರವನ್ನು ಸಾವಿರಾರು ಜೋಡಿ ಕಂಗಳು ವೀಕ್ಷಿಸಿ ತಂಪು ಮಾಡಿಕೊಂಡವು.

